ಈ) ಮತ್ತು ಉ) ಜಾನುವಾರುಗಳಿಗೆ ಅನುಗುಣವಾಗಿ ತಾಲ್ಲೂಕಿನಲ್ಲಿ ಗೋಮಾಳ ಲಭ್ಯವಿಲ್ಲದ ಕಾರಣ ನಮೂನೆ 50–53ರ ಬಾಕಿ ಇದ್ದ ಅರ್ಜಿಗಳು ವಿಲೇಗೊಳಿಸಲಾಗಿರುವುದಿಲ್ಲ.

ಕ್ರೀಡಾ ಪಟುಗಳಿಗೆ ನೀಡುತ್ತಿರುವ ಪ್ರೋತ್ಸಾಹ ಧನ

2010 (2477); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜ್ಯದಲ್ಲಿ ಕ್ರೀಡಾ ಇಲಾಖೆಯು ಪ್ರೋತ್ಸಾಹಿಸುತ್ತಿರುವ ವಿವಿಧ ಕ್ರೀಡೆಗಳ ಮತ್ತು ಕ್ರೀಡಾಪಟುಗಳ ಸಂಖ್ಯೆಯಷ್ಟು; (ಕ್ರೀಡೆಗಳವಾರು ವಿವರ ನೀಡುವುದು)

ಆ) ಈ ಕ್ರೀಡಾಪಟುಗಳಿಗೆ ಸರ್ಕಾರ ಪ್ರೋತ್ಸಾಹ ಧನವನ್ನೇನಾದರೂ ನೀಡುತ್ತಿದೆಯೇ;

ಇ) ಹಾಗಿದ್ದಲ್ಲಿ, ಪ್ರಸ್ತುತ ಯಾವ ಯಾವ ಕ್ರೀಡೆಗಳಿಗೆ ಎಷ್ಟು ಪ್ರಮಾಣದ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ; (ವಿವರ ನೀಡುವುದು)

ಈ) ಪ್ರಸ್ತುತ ಕ್ರೀಡೆಗಳಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ಮತ್ತು ಯಾವಾಗಿನಿಂದ ಜಾರಿಗೆ ತರಲಾಗುವುದು?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) 2014–15ನೇ ಸಾಲಿನಲ್ಲಿ ಇಲಾಖೆಯ ವತಿಯಿಂದ ಪ್ರೋತ್ಸಾಹಿಸಲಾಗುತ್ತಿರುವ ವಿವಿಧ ಕ್ರೀಡೆಗಳು ಹಾಗೂ ಕ್ರೀಡಾಪಟುಗಳ ಸಂಖ್ಯೆ ಈ ಕೆಳಕಂಡಂತಿವೆ.

2014–15ನೇ ಸಾಲಿನಲ್ಲಿ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ಅಡಿಯಲ್ಲಿ ಸೌಲಭ್ಯ ಪಡೆದ ಕ್ರೀಡಾಪಟುಗಳ ಸಂಖ್ಯೆ ಈ ಕೆಳಗಿನಂತಿವೆ.

ಯೋಜನೆ	ಫಲಾನುಭವಿಗಳ ಸಂಖ್ಯೆ
ನಗದು ಬಹುಮಾನ	36
ಏಕಲವ್ಯ ಪ್ರಶಸ್ತಿ	15
ಜೀವಮಾನ ಸಾಧನೆ,	04
ಕರ್ನಾಟಕ ಕ್ರೀಡಾ ರತ್ನ	10
ಕ್ರೀಡಾ ವಿದ್ಯಾರ್ಥಿ ವೇತನ,	1025
ಶೈಕ್ಷಣಿಕ ಶುಲ್ಕ ಮರುಪಾವತಿ	169
ಕ್ರೀಡಾ ಸಂಜೀವಿನಿ ವಿಮಾ ಯೋಜನೆ	6345
ಮಾಸಾಶನ	1600
ಕರ್ನಾಟಕ ಕ್ರೀಡಾ ಪ್ರಾಧಿಕಾರ (ಅನುಬಂಧ–1 ಲಗತ್ತಿಸಿದೆ)	25020
ಕ್ರೀಡಾಶಾಲೆ/ನಿಲಯ (ಅನುಬಂಧ–2 ಲಗತ್ತಿಸಿದೆ)	1661
ಕೇಂದ್ರ ಪುರಸ್ಕೃತ ರಾಜೀವ್ ಗಾಂಧಿ ಖೇಲ್ ಅಭಿಯಾನ್ ಅಡಿ **ಗ್ರಾಮೀಣ ಕ್ರೀಡಾಕೂಟ** (ಖೋ–ಖೋ, ಕಬ್ಬಡಿ, ವಾಲಿಬಾಲ್, ಅಥ್ಲೆಟಿಕ್ಸ್ ಬ್ಯಾಡ್ಮಿಂಟನ್, ಕುಸ್ತಿ, ಹಾಕಿ, ಹ್ಯಾಂಡ್‌ಬಾಲ್, ಪುಟ್‌ಬಾಲ್, ವೈಟ್‌ಲಿಫ್ಟಿಂಗ್, ಟೇಕ್ವಾಂಡೋ ಆರ್ಚರಿ, ಬಾಕ್ಸಿಂಗ್, ಜುಡೋ, ಟೇಬಲ್ ಟೆನ್ನಿಸ್ ಮತ್ತು ಬ್ಯಾಸ್ಕೆಟ್‌ಬಾಲ್ ಮಹಿಳಾ ಕ್ರೀಡಾಕೂಟ (ಅಥ್ಲೆಟಿಕ್ಸ್, ಬ್ಯಾಂಡ್ಮಿಂಟನ್, ಬಾಸ್ಕೆಟ್‌ಬಾಲ್, ಜಿಮ್ನಾಸ್ಟಿಕ್, ಹ್ಯಾಂಡ್‌ಬಾಲ್, ಹಾಕಿ, ಕಬಡ್ಡಿ, ಖೋ–ಖೋ, ಈಜು, ಟೇಬಲ್ ಟೆನ್ನಿಸ್, ವಾಲಿಬಾಲ್ ಮತ್ತು ಟೆನ್ನಿಸ್)	166761 24533

ಆ) ಕ್ರೀಡಾಪಟುಗಳಿಗೆ ಸರ್ಕಾರ ಪ್ರೋತ್ಸಾಹ ಧನ ನೀಡುತ್ತಿದೆ.

ಇ) **ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಿಗೆ ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸುತ್ತಿದೆ.

ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಯೋಜನೆಯ ವಿವರ

(₹ ಲಕ್ಷಗಳಲ್ಲಿ)

ಕ್ರ.ಸ	ವಿವರ	ಚಿನ್ನ	ಬೆಳ್ಳಿ	ಕಂಚು
1	ಒಲಂಪಿಕ್ಸ್	100.00	50.00	25.00
2	ವರ್ಲ್ಡ್ ಕಪ್	50.00	25.00	10.00
3	ಕಾಮನ್‌ವೆಲ್ತ್, ಏಷಿಯನ್ ಗೇಮ್ಸ್ ವಿಶ್ವ ಚಾಂಪಿಯನ್‌ಷಿಪ್ಸ್	25.00	15.00	8.00
4	ಏಷ್ಯನ್ ಚಾಂಪಿಯನ್‌ಷಿಪ್/	10.00	7.00	5.00
5	ಕಿರಿಯರ ಕಾಮನ್‌ವೆಲ್ತ್	15.00	10.00	5.00
6	ಎಸ್.ಎ.ಎ.ಆರ್.ಸಿ/ಎಸ್.ಎ.ಎಫ್	4.00	2.00	1.00
7	ನ್ಯಾಷನಲ್ ಚಾಂಪಿಯನ್‌ಷಿಪ್ ಇಂಟರ್ ಸ್ಟೇಟ್, ಇಂಟರ್ ಜೋನಲ್, ಫೆಡರೇಷನ್ ಕಪ್	2.00	1.00	0.50
8	ಜ್ಯೂನಿಯರ್ ನ್ಯಾಷನಲ್ಸ್	0.50	0.25	0.15
9	ಸಬ್ ಜ್ಯೂನಿಯರ್‌ನ್ಯಾಷನಲ್ಸ್	0.25	0.15	0.10

2. ಏಕಲವ್ಯ ಪ್ರಶಸ್ತಿ: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು. ಈ

ಪ್ರಶಸ್ತಿಯು ₹ 2.00 ಲಕ್ಷ ಸಮವಸ್ತ್ರ, ಕಂಚಿನ ಪ್ರತಿಮೆ ಒಳಗೊಂಡಿರುತ್ತದೆ.

3. ಕರ್ನಾಟಕ ಕ್ರೀಡಾ ರತ್ನ: ಗ್ರಾಮೀಣ ದೇಸೀ ಕ್ರೀಡೆಗಳಿಗೆ ಉತ್ತೇಜನ ನೀಡಲು 2014–15ನೇ ಸಾಲಿನಿಂದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿಯು ₹ 1.00 ಲಕ್ಷಗಳ ನಗದು, ಸಮವಸ್ತ್ರ, ಪ್ರಶಸ್ತಿ ಫಲಕಗಳನ್ನೊಳಗೊಂಡಿರುತ್ತದೆ.

4. ಶೈಕ್ಷಣಿಕ ಶುಲ್ಕ ಮರುಪಾವತಿ. ಮಾನ್ಯತೆ ಪಡೆದ ಕ್ರೀಡಾಸಂಸ್ಥೆಗಳು ನಡೆಸುವ ಅಧಿಕೃತ ಕ್ರೀಡೆಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿ ಸಾಧನೆ ಮಾಡಲಾದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.

5. ವಿದ್ಯಾರ್ಥಿ ವೇತನ: ಮಾನ್ಯತೆ ಪಡೆದ ಕ್ರೀಡಾಸಂಸ್ಥೆಗಳು ನಡೆಸುವ ಅಧಿಕೃತ ಕ್ರೀಡೆಗಳಲಿ ರಾಜ್ಯ ಮಟ್ಟದಲ್ಲಿ ಪದಕ ವಿಜೇತರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ₹10,000/– ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

6. ಕರ್ನಾಟಕ ಕ್ರೀಡಾ ಪ್ರಾಧಿಕಾರ: ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಈ ಕೆಳಕಂಡಂತೆ ಕ್ರೀಡಾಪಟುಗಳ ವೆಚ್ಚ ಭರಿಸಲು ಪ್ರಾಧಿಕಾರದಿಂದ ನಿಯಮಾನುಸಾರ ಅನುದಾನವನ್ನು ನೀಡಲಾಗುತ್ತಿದೆ.

1. ಪ್ರಾಧಿಕಾರದಲ್ಲಿ ಮಾನ್ಯತೆ ಪಡೆದಿರುವ ರಾಜ್ಯ ಕ್ರೀಡಾ ಸಂಸ್ಥೆಗಳ ಮೂಲಕ ಆಯ್ಕೆಗೊಂಡು ದೇಶದ ವಿವಿಧ ಸ್ಥಳಗಳಲ್ಲಿ ನಡೆಯುವ ದಕ್ಷಿಣ ವಲಯ ಹಾಗೂ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸುವ ರಾಜ್ಯ ತಂಡದ

ಕ್ರೀಡಾಪಟುಗಳಿಗೆ ತಗಲುವ ವೆಚ್ಚವನ್ನು ಅಂದರೆ, ರಿಯಾಯಿತಿ ದರದಲ್ಲಿ ರೈಲ್ವೆ ಪ್ರಮಾಣ ದರ, ಪ್ರಯಾಣದ ಅವಧಿಗೆ ಪ್ರತಿ ದಿನಕ್ಕೆ ಪ್ರತಿ ಕ್ರೀಡಾಪಟುವಿಗೆ ₹ 200/– ರಂತೆ ದಿನಭತ್ಯೆ ಬಾಬ್ತು, ಪ್ರತಿ ಕ್ರೀಡಾಪಟುವಿಗೆ ₹1,000/– ದಂತೆ ಕ್ರೀಡಾ ಕಿಟ್ ಬಾಬ್ತು, ಕ್ರೀಡಾಕೂಟದಲ್ಲಿ ಭಾಗವಹಿಸಲು ನಿಗಧಿಪಡಿಸಿರುವ ಪ್ರವೇಶ ಶುಲ್ಕ, ವೈದ್ಯಕೀಯ ವೆಚ್ಚದ ಬಾಬ್ತು ಹಾಗೂ ರಾಜ್ಯ ತಂಡದ ಕ್ರೀಡಾಪಟುಗಳಿಗೆ ಪೂರ್ವಭಾವಿ ತರಬೇತಿ ಶಿಬಿರ ನಡೆಸುವ ಸಂಬಂಧ ತಗಲುವ ವೆಚ್ಚವನ್ನು ಅಂದರೆ, ಕ್ರೀಡಾಪಟುಗಳ ಪ್ರಯಾಣ ಭತ್ಯೆ, ದಿನಭತ್ಯೆ ಸ್ಥಳೀಯ ಕ್ರೀಡಾಪಟುಗಳಿಗೆ ಪ್ರತಿ ದಿನಕ್ಕೆ ₹ 100/–ರಂತೆ ಹಾಗೂ ಪರಸ್ಥಳದ ಕ್ರೀಡಾಪಟುಗಳಿಗೆ ₹ 200/–ರಂತೆ ತರಬೇತಿ ಶಿಬಿರದ ಅವಧಿಗೆ ತಗಲುವ ವೆಚ್ಚವನ್ನು ಪ್ರಾಧಿಕಾರದ ನಿಯಮಾವಳಿಯನ್ವಯ ಸದರಿ ಸಂಸ್ಥೆಗಳಿಗೆ ಅನುದಾನವಾಗಿ ಬಿಡುಗಡೆ ಮಾಡಲಾಗುತ್ತಿದೆ.

2. ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸುವ ರಾಜ್ಯದ ಕ್ರೀಡಾಪಟುಗಳಿಗೆ ಪ್ರಾಧಿಕಾರದ ನಿಯಮಾವಳಿಯನ್ವಯ ವಿಮಾನಯಾನ/ಇತರೆ ವೆಚ್ಚವನ್ನು ಧನಸಹಾಯವಾಗಿ ಪ್ರಾಧಿಕಾರದಿಂದ ಬಿಡುಗಡೆ ಮಾಡಲಾಗುತ್ತಿದೆ.
3. ವಿವಿಧ ರಾಜ್ಯಗಳಲ್ಲಿ ನಡೆಯುವ ಆರ್‌ಜಿಕೆಎ ರಾಷ್ಟ್ರ ಮಟ್ಟದ ಮಹಿಳಾ ಹಾಗೂ ಗ್ರಾಮೀಣ ಕ್ರೀಡಾಕೂಟದಲ್ಲಿ ರಾಜ್ಯ ತಂಡ ಭಾಗವಹಿಸಲು ಅನುದಾನ ನೀಡಲಾಗುತ್ತಿದೆ.
4. 2013ರಲ್ಲಿ ನಡೆದ ರಣಜಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ಕರ್ನಾಟಕ ತಂಡದ ಕ್ರೀಡಾಪಟುಗಳಿಗೆ ವಿಶೇಷ ಪ್ರೋತ್ಸಾಹಧನವಾಗಿ ₹ 100.00 ಲಕ್ಷ

ಮೊತ್ತವನ್ನು 2014–15ನೇ ಸಾಲಿನಲ್ಲಿ ಮಂಜೂರು ಮಾಡಿದ್ದು, ತಂಡದ ಕ್ರೀಡಾಪಟುಗಳಿಗೆ ವಿತರಿಸಲು ಸದರಿ ಮೊತ್ತವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುತ್ತದೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳು ನಡೆಸುವ ಈ ಕೆಳಕಂಡ ಗುಂಪುವಾರು ಕ್ರೀಡೆಗಳಿಗೆ ಈ ಕೆಳಕಂಡಂತೆ ನಿಯಮಾವಳಿಯನ್ವಯ ಆಯಾ ಸಂಸ್ಥೆಯ ಕೋರಿಕೆಯ ಮೇರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಗುಂಪು–1	ಅನುದಾನದ ಪ್ರಮಾಣ
ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ಬ್ಯಾಂಡ್ಮಿಂಟನ್, ಫುಟ್ಬಾಲ್, ಬಾಕ್ಸಿಂಗ್ ಹ್ಯಾಂಡ್‌ಬಾಲ್. ಕಬಡ್ಡಿ, ಖೋ–ಖೋ, ಕುಸ್ತಿ, ಲಾನ್ ಟೆನ್ನಿಸ್, ಟೇಬಲ್ ಟೆನ್ನಿಸ್, ಈಜು, ವಾಲಿಬಾಲ್, ಹಾಕಿ, ವುಶು.	1. ರಾಜ್ಯ ಮಟ್ಟದ ಪಂದ್ಯಾವಳಿಗೆ ₹18,000/–. 2. ದಕ್ಷಿಣ ವಲಯ ಮಟ್ಟದ ಪಂದ್ಯಾವಳಿಗೆ ₹50,000/–. 3. ರಾಷ್ಟ್ರ ಮಟ್ಟದ ಪಂದ್ಯಾವಳಿಗೆ ₹2,00,000/–.
ಗುಂಪು–2	**ಅನುದಾನದ ಪ್ರಮಾಣ**
ಆರ್ಚರಿ, ರೋಯಿಂಗ್ ಜೂಡೋ, ಫೆನ್ಸಿಂಗ್, ಸೈಕ್ಲಿಂಗ್, ರೈಫಲ್, ಬಿಲಿಯರ್ಡ್ಸ್, ಪವರ್ ಲಿಫ್ಟಿಂಗ್, ವೈಯಿಟ್ ಲಿಫ್ಟಿಂಗ, ಟೇಕ್ವಾಂಡೋ, ಜಿಮ್ನಾಸ್ಟಿಕ್ಸ್.	1. ರಾಜ್ಯ ಮಟ್ಟದ ಪಂದ್ಯಾವಳಿಗೆ ₹ 15,000/–. 2. ದಕ್ಷಿಣ ವಲಯ ಮಟ್ಟದ ಪಂದ್ಯಾವಳಿಗೆ ₹ 40,000/–. 3. ರಾಷ್ಟ್ರ ಮಟ್ಟದ ಪಂದ್ಯಾವಳಿ ನಡೆಸಲು ₹ 1,50,000/–.

ಗುಂಪು–3	ಅನುದಾನದ ಪ್ರಮಾಣ
ಕೇರಂ, ಥ್ರೋಬಾಲ್, ಶೂಟಿಂಗ್ ಬಾಲ್, ಆಟ್ಯಾ–ಪಾಟ್ಯಾ, ಸ್ಕೇಟಿಂಗ್, ಬಾಡಿ ಬಿಲ್ಡಿಂಗ್, ಟ್ರಯಥ್ಲಾನ್, ಚೆಸ್, ಕ್ರಿಕೆಟ್, ಟೆನಿಕಾಯಿಟ್, ಟಗ್–ಆಫ್ ವಾರ್, ಕೆನೋಯಿಂಗ್ ಕಯಾಕಿಂಗ್, ನೆಟ್‌ಬಾಲ್, ಯೋಗ, ಸ್ಯ್ಕಾಷ್, ಡೆಫ್, ವಿಕಲಚೇತನರ ಕ್ರೀಡೆಗಳು, ಕರಾಟೆ, ಟೆನ್ನಿಸ್‌ಬಾಲ್ ಕ್ರಿಕೆಟ್, ಸೆಪಕ್ ಟಕ್ರಾ.	1. ರಾಜ್ಯ ಮಟ್ಟದ ಪಂದ್ಯಾವಳಿಗೆ ₹10,000/–. 2. ದಕ್ಷಿಣ ವಲಯ ಮಟ್ಟದ ಪಂದ್ಯಾವಳಿಗೆ ₹ 30,000/–. 3. ರಾಷ್ಟ್ರ ಮಟ್ಟದ ಪಂದ್ಯಾವಳಿ ನಡೆಸಲು ₹ 1,00,000/–.

ದಸರಾ ಕ್ರೀಡಾಕೂಟ ಆಯೋಜನೆ ಸಂಬಂಧ ಅನುದಾನ ನೀಡಲಾಗುತ್ತಿದ್ದು, 2014–15ನೇ ಸಾಲಿನಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಬೆಳಗಾವಿ ಹಾಗೂ ಗುಲ್ಬರ್ಗಾ ವಿಭಾಗ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಪ್ರತಿ ವಿಭಾಗಕ್ಕೆ ತಲಾ ₹1,50,000/– ದಂತೆ ಹಾಗೂ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟಕ್ಕೆ ₹ 25,00,000/– ಅನುದಾನ ನೀಡಲಾಗಿದೆ.

ಈ) ಪ್ರಸ್ತುತ ಕ್ರೀಡೆಗಳಿಗೆ ನೀಡುತ್ತಿರುವ ಅನುದಾನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅನುಬಂಧ–1

2014–15ನೇ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಮೂಲಕ ಪ್ರೋತ್ಸಾಹಿಸಲಾಗುತ್ತಿರುವ ವಿವಿಧ ಕ್ರೀಡೆಗಳು ಹಾಗೂ ಕ್ರೀಡಾಪಟುಗಳ ಸಂಖ್ಯೆ ಈ ಕೆಳಕಂಡಂತಿವೆ.

ಕ್ರ. ಸಂ	ಕ್ರೀಡೆ	ಕ್ರೀಡಾಪಟುಗಳ ಸಂಖ್ಯೆ
01	ಅಥ್ಲೆಟಿಕ್ಸ್	3190
02	ಬ್ಯಾಸ್ಕೆಟ್‌ಬಾಲ್	780
03	ಈಜು	616
04	ಹಾಕಿ	1340
05	ಬ್ಯಾಡ್ಮಿಂಟನ್	65
06	ಲಾನ್ ಟೆನ್ನಿಸ್	27
07	ಖೋ-ಖೋ	754
08	ಕುಸ್ತಿ	31
09	ರೋಯಿಂಗ್	232
10	ಟೇಬಲ್ ಟೆನ್ನಿಸ್	330
11	ಆರ್ಚರಿ	65
12	ವಾಲಿಬಾಲ್	608
13	ಜೂಡೋ	79
14	ಬಾಕ್ಸಿಂಗ್	62
15	ಫೆನ್ಸಿಂಗ್	78
16	ಫುಟ್ಬಾಲ್	83
17	ವಿಕಲಚೇತನರ ಕ್ರೀಡೆಗಳು	982
18	ಜಿಮ್ನಾಸ್ಟಿಕ್ಸ್	08
19	ಕಬಡ್ಡಿ	272
20	ಟೇಕ್ವಾಂಡೋ	227
21	ವೈಯಿಟ್ ಲಿಫ್ಟಿಂಗ್	30
22	ರೈಫಲ್ ಶೂಟಿಂಗ್	29
23	ಸೆಪಕ್ ಟಕ್ರಾ	514
24	ನೆಟ್‌ಬಾಲ್	366
25	ಆಟ್ಯಾ-ಪಾಟ್ಯಾ	544
26	ಪೈಕು	352
27	ಹ್ಯಾಂಡ್‌ಬಾಲ್	833
28	ಸ್ಕೇಟ್ಟಿಂಗ್	264
29	ಟೆನ್ನಿಸ್‌ಬಾಲ್ ಕ್ರಿಕೆಟ್	210
30	ಟಗ್-ಆಫ್ ವಾರ್	144
31	ಟೆನಿಕಾಯಿಟ್	214
32	ಶೂಟಿಂಗ್ ಬಾಲ್	48
33	ಟ್ರಯಥ್ಲಾನ್	06

34	ಸ್ಕ್ಯಾಷ್	08
35	ಪವರ್ ಲಿಫ್ಟಿಂಗ್	153
36	ಯೋಗ	13
37	ಬಾಡಿ ಬಿಲ್ಡಿಂಗ್	06
38	ಚೆಸ್	107
39	ಕರಾಟೆ	87
40	ಬಿಲಿಯರ್ಡ್ಸ್	05
41	ಥ್ರೋಬಾಲ್	01
42	ಕ್ರಿಕೆಟ್	256
43	ರೋಲರ್ ಸ್ಕೇಟಿಂಗ್	01
44	ದಸರಾ ಕ್ರೀಡಾಕೂಟ	11000
ಒಟ್ಟು		25020

ಅನುಬಂಧ– 2

2014–15ನೇ ಕ್ರೀಡಾಶಾಲೆ/ ನಿಲಯದಲ್ಲಿ ಹರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳ ವಿವರ

ಕ್ರ ಸಂ	ಜಿಲ್ಲೆ	ಕ್ರೀಡೆ	ಬಾಲಕರು	ಬಾಲಕಿಯರು	ಒಟ್ಟು
1	ರಾಮನಗರ ಶಾಲೆ	ಅಥ್ಲೆಟಿಕ್ಸ್, ಫುಟ್ಬಾಲ್, ವಾಲಿಬಾಲ್	29	13	42
2	ಉತ್ತರ ಕನ್ನಡ	ಅಥ್ಲೆಟಿಕ್ಸ್, ಕುಸ್ತಿ, ವಾಲಿಬಾಲ್	29	21	50
3	ಬೆಳಗಾವಿ ಶಾಲೆ	ಕುಸ್ತಿ, ಜುಡೋ, ಅಥ್ಲೆಟಿಕ್ಸ್, ವಾಲಿಬಾಲ್	32	18	50
4	ಬಾಗಲಕೋಟೆ ಶಾಲೆ	ಕುಸ್ತಿ, ಸೈಕ್ಲಿಂಗ್,	44	13	57
5	ವಿಜಾಪುರ ಶಾಲೆ	ಬ್ಯಾಸ್ಕೆಟ್‌ಬಾಲ್, ಸೈಕ್ಲಿಂಗ್, ಫುಟ್ಬಾಲ್	25	20	45
6	ಬೀದರ್ ಶಾಲೆ	ಅಥ್ಲೆಟಿಕ್ಸ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್	34	10	44
7	ಚಿತ್ರದುರ್ಗ ಶಾಲೆ	ಅಥ್ಲೆಟಿಕ್ಸ್, ವಾಲಿಬಾಲ್, ಈಜು	35	15	50
8	ಚಿಕ್ಕಮಗಳೂರು ಶಾಲೆ	ಅಥ್ಲೆಟಿಕ್ಸ್, ವಾಲಿಬಾಲ್, ಜುಡೋ	29	19	48
9	ಚಾಮರಾಜನಗರ ಶಾಲೆ	ವಾಲಿಬಾಲ್, ಫುಟ್ಬಾಲ್,	29	–	29
10	ದಾವಣಗೆರೆ ಶಾಲೆ	ಕುಸ್ತಿ, ಅಥ್ಲೆಟಿಕ್ಸ್, ಕಬಡ್ಡಿ	47	–	47
11	ಧಾರವಾಡ ಶಾಲೆ	ಜಿಮ್ನಾಸ್ಟಿಕ್ಸ್, ಹಾಕಿ, ಅಥ್ಲೆಟಿಕ್ಸ್	28	22	50
12	ಗದಗ್ ಶಾಲೆ	ಹಾಕಿ, ಕುಸ್ತಿ, ಸೈಕ್ಲಿಂಗ್	35	13	48
13	ಹಾವೇರಿ ಶಾಲೆ	ಅಥ್ಲೆಟಿಕ್ಸ್, ಹಾಕಿ, ಈಜು	28	21	49
14	ಕೋಲಾರ ಶಾಲೆ	ಫುಟ್ಬಾಲ್, ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್	25	12	37
15	ಮಂಗಳೂರು ಶಾಲೆ	ಅಥ್ಲೆಟಿಕ್ಸ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್	31	19	50
16	ಹಾಸನ ಶಾಲೆ	ಹಾಕಿ, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್	26	19	45
17	ಕೊಪ್ಪಳ ಶಾಲೆ	ವಾಲಿಬಾಲ್, ಅಥ್ಲೆಟಿಕ್ಸ್, ಈಜು	28	16	44
18	ಮಂಡ್ಯ ಶಾಲೆ	ಬ್ಯಾಸ್ಕೆಟ್‌ಬಾಲ್, ಫುಟ್ಬಾಲ್, ಅಥ್ಲೆಟಿಕ್ಸ್	29	21	50
19	ಮೈಸೂರು ಶಾಲೆ	ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್ಸ್, ವಾಲಿಬಾಲ್	22	25	47
20	ರಾಯಚೂರು ಶಾಲೆ	ಹಾಕಿ, ಫುಟ್ಬಾಲ್,ಅಥ್ಲೆಟಿಕ್ಸ್	48	–	48
21	ಶಿವಮೊಗ್ಗ ಶಾಲೆ	ಅಥ್ಲೆಟಿಕ್ಸ್, ಹಾಕಿ, ಫುಟ್ಬಾಲ್	34	16	50

22	ತುಮಕೂರು ಶಾಲೆ	ವಾಲಿಬಾಲ್, ಜಿಮ್ನಾಸ್ಟಿಕ್ಸ್, ಅಥ್ಲೆಟಿಕ್ಸ್	27	19	46
23	ಉಡುಪಿ ಶಾಲೆ	ಅಥ್ಲೆಟಿಕ್ಸ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್	37	12	49
		ಒಟ್ಟು	731	344	1075

7 ಕ್ರೀಡಾಶಾಲೆ/ ನಿಲಯ			ಬಾಲಕರು	ಬಾಲಕಿಯರು	ಒಟ್ಟು
1	ಕೂಡಿಗೆ ಶಾಲೆ	ಅಥ್ಲೆಟಿಕ್ಸ್,	20	25	45
		ಹಾಕಿ,	30	20	50
		ಜಿಮ್ನಾಸ್ಟಿಕ್ಸ್	08	10	18
		ಒಟ್ಟು	58	55	113
2	ವಿದ್ಯಾನಗರ ಶಾಲೆ	ಅಥ್ಲೆಟಿಕ್ಸ್,	28	20	48
		ಬ್ಯಾಸ್ಕೆಟ್‌ಬಾಲ್,	07	23	30
		ಫುಟ್ಬಾಲ್,	20	–	20
		ವಾಲಿಬಾಲ್	18	08	26
		ಒಟ್ಟು	73	51	124
3	ಬೆಂಗಳೂರು ನಿಲಯ	ಅಥ್ಲೆಟಿಕ್ಸ್,	22		22
		ಬ್ಯಾಸ್ಕೆಟ್‌ಬಾಲ್,	16		16
		ಫುಟ್ಬಾಲ್	23		23
		ವಾಲಿಬಾಲ್,	15		15
		ಹಾಕಿ	31		31
		ಒಟ್ಟು	107		107
4	ಮೈಸೂರು ಕ್ರೀಡಾ ನಿಲಯ	ಅಥ್ಲೆಟಿಕ್ಸ್,		19	19
		ಬ್ಯಾಸ್ಕೆಟ್‌ಬಾಲ್,		13	13
		ವಾಲಿಬಾಲ್,		30	30
		ಹಾಕಿ		13	13
		ಒಟ್ಟು	ಒಟ್ಟು	75	75
5	ಬೆಳಗಾವಿ ಕ್ರೀಡಾ ನಿಲಯ	ಕುಸ್ತಿ,	31	17	48
		ಜುಡೋ	36	14	50
		ಒಟ್ಟು	67	31	98
6	ಬಿಜಾಪುರ ಕ್ರೀಡಾ ನಿಲಯ	ಸ್ಕೇಟಿಂಗ್	22	08	30
		ಒಟ್ಟು	22	08	30
7	ದಾವಣಗೆರೆ ಕ್ರೀಡಾ ನಿಲಯ	ಕುಸ್ತಿ	39	–	38
			39	–	38
		ಒಟ್ಟು	366	220	586